



# ಕಟ್ಟಿಗೆ ಕಟ್ಟಡ!

ಇದು ವಿಶ್ವದ ಅತ್ಯಂತ ಎತ್ತರದ ಕಟ್ಟಿಗೆಯ ಕಟ್ಟಡ. ಇದನ್ನು ಕಟ್ಟಲು ಬಳಸಿದ್ದು ಬರೀ ಕಟ್ಟಿಗೆ. ಇಲ್ಲಿನ ಕಟ್ಟಿಗೆಯ ಕಮಾನುಗಳನ್ನು ಜೋಡಿಸಲು ಕಟ್ಟಿಗೆಯ ಬೆಣೆಗಳನ್ನೇ ಬಳಸಲಾಗಿದೆ. ನಟ್ಟು–ಬೋಲ್ಟು–ಮೊಳೆ ಯಾವುದೂ ಇಲ್ಲ!

50 ವರ್ಷಗಳಿಂದ ತಲೆ ಎತ್ತಿ ನಿಂತಿರುವ ಈ ಕಟ್ಟಡದ ಎತ್ತರ 123 ಅಡಿ (35.5 ಮೀಟರ್). ಸಂಪೂರ್ಣ ಕಟ್ಟಿಗೆಯ ಈ ಕಟ್ಟಡವೇ ‘ಕಿಝಿ ಪೊಗೊಸ್ಟ ಚರ್ಚ್’. ಇದು ಪಶ್ಚಿಮ ರಷ್ಯಾದ ಕಿಝಿ ದ್ವೀಪದಲ್ಲಿದೆ. 150 ವರ್ಷಗಳಿಂದ ತನ್ನನ್ನು ಸೂರ್ಯ ಪ್ರಕಾಶಕ್ಕೆ ಒಡ್ಡಿಕೊಂಡ ಈ ಚರ್ಚಿನ ಹೊರ ಭಾಗಗಳು ಬೆಳ್ಳಿ ರೂಪವನ್ನು ಪಡೆದುಕೊಂಡಿವೆ. 18ನೇ ಶತಮಾನದ ಆರಂಭದಲ್ಲಿ ಇದರ ನಿರ್ಮಾಣ ಕಾರ್ಯ ಆರಂಭಗೊಂಡಿದ್ದು 1882ರಲ್ಲಿ ಮುಕ್ತಾಯವಾಯಿತು. ನಂತರವೂ ಈ ಕಟ್ಟಡ ಕೆಲವು ನವೀಕರಣಕ್ಕೆ ಒಳಗಾಗಿದೆಯಾದರೂ ಆಗಲೂ ಕಟ್ಟಿಗೆ ಬಿಟ್ಟು ಬೇರೆ ಯಾವ ವಸ್ತುಗಳನ್ನೂ ಇಲ್ಲಿ ಬಳಸಿಲ್ಲ ಎಂಬುದು ವಿಶೇಷ.

ಅತಿ ಎತ್ತರವಾದ ಈ ಚರ್ಚ್ ನೋಡಲು ಸುಂದರವಾಗಿದೆ. 22 ಗುಮ್ಮಟಗಳನ್ನು ಹೊಂದಿದ್ದು, ಸೂಕ್ಷ್ಮ ಕುಸುರಿ ಕಲೆಯಲ್ಲಿ ಅರಳಿದೆ. ಚರ್ಚ್‌ನ ಒಳಭಾಗ ಪಿರಮಿಡ್ ಆಕಾರದಲ್ಲಿದೆ. ಅಲ್ಲಿ 17 ಹಾಗೂ18 ಶತಮಾನದ 102 ಧಾರ್ಮಿಕ ಪ್ರತಿಮೆಗಳಿವೆ.

ಕಿಝಿ ಪೊಗೊಸ್ಟ ಮನಸೂರೆಗೊಳ್ಳುವ ವಿನ್ಯಾಸವನ್ನು ಹೊಂದಿದೆ. 1990ರಲ್ಲಿ ಇದನ್ನು ಯುನೆಸ್ಕೋ, ‘ವಿಶ್ವ ಪರಂಪರೆ ಪಟ್ಟಿ’ಯಲ್ಲಿ ಸೇರಿಸಲಾಗಿದೆ. ಧಾರ್ಮಿಕ ಸ್ಥಳಗಳು ಪರಂಪರೆ ಸೇರುವುದು ಅತ್ಯಂತ ಅಪರೂಪ.

ಅಮೆರಿಕದ ನ್ಯೂ ಮ್ಯಾಕ್ಸಿಕೋ ಪ್ರಾಂತದಲ್ಲಿ ಅಲ್ಬುಕರ್ಕ್ ಎಂಬ ನಗರ ಇದೆ. ಅಲ್ಲಿಯೂ 600 ಅಡಿ ಎತ್ತರದ ಅಟ್ಲಾಸ್–1 ಎಂಬ ಕಟ್ಟಿಗೆಯ ಕಟ್ಟಡ ಇದೆ. ಅದು ಜಗತ್ತಿನಲ್ಲಿಯೇ ಅತಿ ದೊಡ್ಡದಾದರೂ, ಸಂಪೂರ್ಣ ಕಟ್ಟಿಗೆಯ ಕಟ್ಟಡವಲ್ಲ. ಅದರ ಕಟ್ಟಿಗೆಯ ಕಮಾನುಗಳನ್ನು ಜೋಡಿಸಲು ಲೋಹದ ವಸ್ತುಗಳನ್ನು ಉಪಯೋಗಿಸಲಾಗಿದೆ.

■ ಸುಭಾಸ ಯಾದವಾಡ

